"JULY 2026 Makeup SEE"

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/02/ಇಸಿಎಸ್ (1)/2026

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
Email:dte.commissioner@gmail.com
ದಿನಾಂಕ: 17.07.2026

## ಅಧಿಕೃತ ಜ್ಞಾಪನ

ವಿಷಯ: 2025-26ನೇ ಶೈಕ್ಷಣಿಕ ಸಾಲಿನಿಂದ ಜಾರಿಯಲ್ಲಿರುವ C-25 ಪಠ್ಯಕ್ರಮದಲ್ಲಿ ಪ್ರವೇಶ ಪಡೆದು ನಿರಂತರ ಆಂತರಿಕ ಮೌಲ್ಯಮಾಪನ (CIE)ದಲ್ಲಿ ಕನಿಷ್ಠ ಅರ್ಹತೆಗಳನ್ನು ಪೂರೈಸದ (ಶೇಕಡಾ40ಕ್ಕಿಂತ ಕಡಿಮೆ CIE ಅಂಕಗಳನ್ನು ಪಡೆದು Not Eligible ಆಗಿರುವ ವಿಷಯಗಳಲ್ಲಿ) ಅಥವಾ ನಾಲ್ಕಕ್ಕೂ ಹೆಚ್ಚು ಕೋರ್ಸ್‌ಗಳಲ್ಲಿ ಅನುತ್ತೀರ್ಣರಾಗಿ, ಉನ್ನತ ಸೆಮಿಸ್ಟರ್‌ಗೆ ಬಡ್ತಿ ಪಡೆಯಲು ಅನರ್ಹರಾಗಿರುವ ವಿದ್ಯಾರ್ಥಿಗಳು ಜುಲೈ 2026 Makeup (SEE) ಪರೀಕ್ಷೆಗೆ ನೋಂದಾಯಿಸುವ ಬಗ್ಗೆ.

ಉಲ್ಲೇಖ:
1) ಸರ್ಕಾರಿ ಆದೇಶ ಸಂಖ್ಯೆ: ಇಡಿ11 ಟಿಪಿಇ 2007 ಬೆಂಗಳೂರು ದಿನಾಂಕ:03.12.2007
2) ಸರ್ಕಾರಿ ಆದೇಶ ಸಂಖ್ಯೆ:ಇಡಿ 79 ಡಿಟಿಇ 2025 ದಿನಾಂಕ:27.06.2025
3) ಈ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ:ಬಿಟಿಇ/02/ಇಸಿಎಸ್(1)/2026 ದಿ:25.05.2026

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (2) ರ ಸರ್ಕಾರಿ ಆದೇಶದಲ್ಲಿ ಸರ್ಕಾರವು 2025-26ನೇ ಸಾಲಿನಿಂದ ಡಿಪ್ಲೋಮ ಪ್ರೋಗ್ರಾಮ್‌ಗಳ ಪಠ್ಯಕ್ರಮವನ್ನು ಪರಿಷ್ಕರಿಸಿ ಆದೇಶಿಸಿದೆ. ಸರ್ಕಾರಿ ಆದೇಶಕ್ಕೆ ಲಗತ್ತಿಸಿರುವ 2025 ರ ಪರಿಷ್ಕೃತ ಪಠ್ಯಕ್ರಮದ ಡಿಪ್ಲೋಮ ಪ್ರೋಗ್ರಾಮ್‌ಗಳ ನಿಯಮಾವಳಿಗಳ ಕಂಡಿಕೆ 12 ಉಪ ಕಂಡಿಕೆ 12.4 ಗಳನ್ವಯ 2025-26 ನೇ ಶೈಕ್ಷಣಿಕ ಸಾಲಿನಿಂದ ಜಾರಿಯಲ್ಲಿರುವ C-25 ಪಠ್ಯಕ್ರಮದಲ್ಲಿ ಪ್ರವೇಶ ಪಡೆದು ಶೇಕಡಾ 40 ಕ್ಕಿಂತ ಕಡಿಮೆ CIE ಅಂಕಗಳನ್ನು ಪಡೆದು Not Eligible ಆಗಿದ್ದೂ ಉಲ್ಲೇಖ (3) ರ ಸುತ್ತೋಲೆಯನ್ವಯ ಜೂನ್ 2026 Makeup CIE ಮತ್ತು ಜುಲೈ 2026 Makeup (SEE) ಪರೀಕ್ಷೆಗೆ ನೋಂದಾಯಿಸುವ ಮತ್ತು ನಾಲ್ಕಕ್ಕೂ ಹೆಚ್ಚು ಕೋರ್ಸ್‌ಗಳಲ್ಲಿ ಅನುತ್ತೀರ್ಣರಾಗಿ, ಉನ್ನತ ಸೆಮಿಸ್ಟರ್‌ಗೆ ಬಡ್ತಿ ಪಡೆಯಲು ಅನರ್ಹರಾಗಿರುವ ವಿದ್ಯಾರ್ಥಿಗಳಿಂದ ನಿಗದಿತ **"JULY 2026 Makeup SEE"** ಅರ್ಜಿ ನಮೂನೆಯೊಂದಿಗೆ ಪರೀಕ್ಷಾ ಶುಲ್ಕವನ್ನು ದಿನಾಂಕ:24.07.2026 ರವರೆಗೆ ಈ ಕೆಳಕಂಡಂತೆ ಪಡೆಯತಕ್ಕದ್ದೆಂದು ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ.

1. ಪ್ರತಿ ಸೆಮಿಸ್ಟರ್‌ನ ಒಂದು ವಿಷಯಕ್ಕೆ ರೂ.200+ರೂ.50 ಅಂಕಪಟ್ಟಿ ಶುಲ್ಕ
2. ಪ್ರತಿ ಸೆಮಿಸ್ಟರ್‌ನ ಎರಡು ವಿಷಯಗಳಿಗೆ ರೂ.200+ರೂ.50 ಅಂಕಪಟ್ಟಿ ಶುಲ್ಕ
3. ಪ್ರತಿ ಸೆಮಿಸ್ಟರ್‌ನ ಮೂರು/ ಹೆಚ್ಚು ವಿಷಯಗಳಿಗೆ ರೂ.300+ರೂ.50 ಅಂಕಪಟ್ಟಿ ಶುಲ್ಕ

ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರುಗಳು ಪ್ರತಿ ವಿದ್ಯಾರ್ಥಿಯು ಪರೀಕ್ಷಾ ಶುಲ್ಕವನ್ನು K2 ಮುಖಾಂತರ ಸರ್ಕಾರಿ ಖಜಾನೆಗೆ ಲೆಕ್ಕ ಶೀರ್ಷಿಕೆ (0202-02-101-0-01) ಗೆ ಜಮಾ ಮಾಡುವ ಬಗ್ಗೆ ನಿಗಾವಹಿಸಿ ಕ್ರಮಕೈಗೊಳ್ಳುವುದು.

ಉಲ್ಲೇಖ (3)ರ ಸುತ್ತೋಲೆಯನ್ವಯ ಈಗಾಗಲೇ ಜೂನ್ 2026 Makeup ಕಿರುಪರೀಕ್ಷೆ (CIE) ಗಳಿಗೆ ನೋಂದಾಯಿಸಿರುವ ವಿದ್ಯಾರ್ಥಿಗಳು, ಮೇ/ಜೂನ್ 2026 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷಾ ಫಲಿತಾಂಶ ಪ್ರಕಟಣೆ ನಂತರ ನಾಲ್ಕಕ್ಕೂ ಹೆಚ್ಚು ಕೋರ್ಸ್‌ಗಳಲ್ಲಿ ಅನುತ್ತೀರ್ಣರಾಗಿ, ಉನ್ನತ ಸೆಮಿಸ್ಟರ್‌ಗೆ ಬಡ್ತಿ ಪಡೆಯಲು ಅನರ್ಹರಾಗಿದ್ದಲ್ಲಿ ಮಾತ್ರ ಅಂತಹ ವಿದ್ಯಾರ್ಥಿಗಳು ಜುಲೈ2026ರ Makeup SEE ಪರೀಕ್ಷೆಗೆ ನೋಂದಾಯಿಸಿಕೊಳ್ಳಲು ಸಂಬಂಧಪಟ್ಟ ಸೆಮಿಸ್ಟರ್ ನ ಪರೀಕ್ಷಾ ಶುಲ್ಕ ವ್ಯತ್ಯಾಸದ ಮೊತ್ತವನ್ನು ಸರಿದೂಗಿಸಿ ಕಡ್ಡಾಯವಾಗಿ ದಿನಾಂಕ:24.07.2026 ರೊಳಗೆ ಪಾವತಿಸಬೇಕಾಗಿರುತ್ತದೆ.

ಜುಲೈ 2026 Makeup (SEE) ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮುಂದಿನ ಸೆಮಿಸ್ಟರ್ ತರಗತಿಗಳಿಗೆ ಹಾಜರಾಗಲು ಅನುಮತಿ ನೀಡಿ Makeup Exam ಫಲಿತಾಂಶ ಪ್ರಕಟಗೊಂಡ ನಂತರ ಅರ್ಹ

ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡುವುದು ಮತ್ತು ಅಂತಹ ಪ್ರಕರಣಗಳ ಜವಾಬ್ದಾರಿಯನ್ನು ಪ್ರಾಚಾರ್ಯರೇ ತೆಗೆದುಕೊಳ್ಳಬೇಕಾಗುತ್ತದೆ.

ಜುಲೈ 2026 ಡಿಪ್ಲೋಮ ಸೆಮಿಸ್ಟರ್ Makeup (SEE) ಪರೀಕ್ಷೆ ತೆಗೆದುಕೊಳ್ಳಲು ಪರೀಕ್ಷಾ ಶುಲ್ಕ ಪಾವತಿಸಿದ ವಿದ್ಯಾರ್ಥಿಗಳ ವಿವರಗಳನ್ನು ಕೂಡಲೇ DTE-EMS ಆನ್‌ಲೈನ್ ವೆಬ್‌ಪೋರ್ಟಲ್‌ನಲ್ಲಿ ಇರುವಂತಹ ಕ್ಯಾಂಡಿಡೇಟ್ ಲಿಸ್ಟ್‌ನಲ್ಲಿ K2 ಮುಖಾಂತರ ಪರೀಕ್ಷಾ ಶುಲ್ಕ ಪಾವತಿಸಿರುವ ಚಲನ್ ಸಂಖ್ಯೆ ನಮೂದಿಸಿರುವ ಆಧಾರದ ಮೇಲೆ Update ಮಾಡಬೇಕಾಗಿರುತ್ತದೆ.

**ವಿಶೇಷ ಸೂಚನೆ:**

1. **ಒಂದು ಮತ್ತು ಎರಡನೇ ಸೆಮಿಸ್ಟರ್‌ಗಳ ಒಟ್ಟು 5 ಅಥವಾ 5 ಕ್ಕಿಂತ ಹೆಚ್ಚು ಥಿಯರಿ ಮತ್ತು ಪ್ರಾಯೋಗಿಕ ಕೋರ್ಸ್‌ಗಳಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಂದ ಮಾತ್ರ ಜುಲೈ 2026 Makeup (SEE) ಪರೀಕ್ಷಾ ಶುಲ್ಕಗಳನ್ನು ಪಡೆಯುವುದು.**
2. **ನವೆಂಬರ್/ಡಿಸೆಂಬರ್ 2026 ರ ಪರೀಕ್ಷಾ ಶುಲ್ಕವನ್ನು ಹಾಗೂ ಜುಲೈ 2026 Makeup (SEE) ಪರೀಕ್ಷಾ ಶುಲ್ಕಗಳನ್ನು ಪ್ರತ್ಯೇಕವಾಗಿ ಪಡೆಯುವುದು.**
3. **ಜೂನ್ 2026 Makeup ಕಿರುಪರೀಕ್ಷೆ (CIE) ಗಳಿಗೆ ನೋಂದಾಯಿಸುವ ವಿದ್ಯಾರ್ಥಿಗಳಿಂದ ನಿಯಮನುಸಾರ ಅನ್ವಯವಾಗುವ ಸಂಬಂಧಪಟ್ಟ ಸೆಮಿಸ್ಟರ್ ನ ಪರೀಕ್ಷಾ ಶುಲ್ಕ ವ್ಯತ್ಯಾಸದ ಮೊತ್ತವನ್ನು ಸರಿದೂಗಿಸಿ ಕಡ್ಡಾಯವಾಗಿ ಪಡೆಯುವುದು.**

ಜುಲೈ 2026 ಮಾಹೆಯಲ್ಲಿ Makeup (SEE) ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷೆಯ ವೇಳಾಪಟ್ಟಿಯನ್ನು ಸದ್ಯದಲ್ಲಿಯೇ ಪ್ರಕಟಿಸಲಾಗುವುದೆಂದು ಎಲ್ಲಾ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ –ಮಾಹಿತಿ ಮತ್ತು ಅಗತ್ಯಕ್ರಮಕ್ಕಾಗಿ

ಪ್ರತಿ:
1. ಆಯುಕ್ತರ ಆಪ್ತಶಾಖೆ – ಅವಗಾಹನೆಗಾಗಿ
2. ನಿರ್ದೇಶಕರ ಆಪ್ತಶಾಖೆ – ಅವಗಾಹನೆಗಾಗಿ
3. DTE-EMS ತಂಡ – ಮುಂದಿನ ಕ್ರಮಕ್ಕಾಗಿ
4. ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
5. ಇಸಿಎಸ್/ಇಎಫ್ ಎಸ್/ಇಆರ್‌ಎಸ್- ಮುಂದಿನ ಕ್ರಮಕ್ಕಾಗಿ
6. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
7. ರಿಜಿಸ್ಟ್ರಾರ್ (ಪರೀಕ್ಷೆ)
8. ಅಧೀಕ್ಷಕರು (ಆರ್‌ಡಿಎಂ (1) ರಿಂದ (15))